ಆ) ವಿಷಯ: ಕೋಲಾರದ ರೇಷ್ಮೆ ಕಾಲೇಜಿನಲ್ಲಿ ಬಿಎಸ್ಸಿ ಕೋರ್ಸ್ ಪ್ರಾರಂಭಿಸುವುದರ ಬಗ್ಗೆ

ಶ್ರೀ ಕೆ ಶ್ರೀನಿವಾಸ ಗೌಡ(ಕೋಲಾರ): ಮಾನ್ಯ ಅಧ್ಯಕ್ಷರೆ, ಬೆಂಗಳುರು ಕೃಷಿ ವಿಶ್ವವಿದ್ಯಾನಿಲಯದ ಮೂಲಕ ಕೋಲಾರ ಜಿಲ್ಲೆಯಲ್ಲಿ ಒಂದು ರೇಷ್ಮೆ ಕಾಲೇಜು ನಡೆಯುತ್ತಿದೆ. ಆ ರೇಷ್ಮೆ ಕಾಲೇಜಿನಲ್ಲಿ ಇತ್ತೀಚೆಗೆ ಬಿಎಸ್ಸಿ ಮಾಡಿದವರಿಗೆ ಹೆಚ್ಚು ಹೆಚ್ಚಿಗೆ ಕೆಲಸ ಸಿಗದಿರುವುದರಿಂದ ಅಡ್ಮಿಷನ್ ಕಡಿಮೆಯಾಗಿದೆ. ನಾನು ಕೃಷಿ ಮಂತ್ರಿ ಆಗಿದ್ದಾಗ ಒಂದು ಸೂಚನೆಯನ್ನು ಕೊಟ್ಟಿದ್ದೆ. ಅಲ್ಲಿ ಬಿಎಸ್ಸಿ ಯವರಿಗೆ ಅಗ್ರಿ ಕೋರ್ಸ್ ಶುರುಮಾಡಿ ಎಂದು. ಅದಕ್ಕೆ ಯೂನಿವರ್ಸಿಟಿಯವರು ಮತ್ತು ಆ ಕಮಿಟಿ ಕೂಡ ಒಪ್ಪಿದ್ದಾರೆ. ಅವರು ಕೇವಲ 2 ಕೋಟಿ ರೂಗಳನ್ನು ಈ ವರ್ಷ ಶುರು ಮಾಡಲಿಕ್ಕೆ ಕೇಳುತ್ತಿದ್ದಾರೆ. ಆದರೆ ಅದನ್ನು ಇದುವರೆಗೆ ಕೊಟ್ಟಿಲ್ಲ. ಈ ಬಗ್ಗೆ ತಮ್ಮ ಮೂಲಕ ಮಾನ್ಯ ಕೃಷಿ ಮಂತ್ರಿಗಳಿಗೆ ಶೂನ್ಯ ವೇಳೆಯಲ್ಲಿ ಉತ್ತರವನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ನಮ್ಮ ಹಿರಿಯ ಸದಸ್ಯರು ಹಿಂದೆ ಸಚಿವರಾಗಿದ್ದಾಗ ಅದನ್ನು ಒಂದು ಲೆವೆಲ್‌ಗೆ ತಂದು ಇಟ್ಟಿದ್ದರು. ಆದರೆ ನಾನು ಬಂದ ಮೇಲೆ ಯಾರು ಇದರ ರೆಪ್ರೆಸೆಂಟೇಷನ್ ಮಾಡಲಿಲ್ಲ. ಯಾವ ಫೈಲ್ ಕೂಡ ನನ್ನ ಹತ್ತಿರ ಬರಲಿಲ್ಲ. ಒಂದು ತಿಂಗಳ ಹಿಂದೆ ಮಾನ್ಯ ಕೃಷ್ಣ ಭೈರೇಗೌಡರು ಇನ್‌ಛಾರ್ಜ್ ಮಂತ್ರಿ ಇಬ್ಬರೂ ಸೇರಿ ನನಗೆ ಮಾತನಾಡಿದಾಗ, ತಕ್ಷಣ ಆ ಸಂಭಂಧ ಪಟ್ಟ ಫೈಲ್ ತರಿಸಿ ನೋಡಲಾಗಿ, ಅದಕ್ಕೆ financial approval ಬೇಕಾಗಿದೆ ನಾವು ಈಗ already Deputy CMಅವರಿಗೆ ಸಚಿವ ಸಂಪುಟದಲ್ಲಿನಾನು ಮತ್ತು incharge ಮಂತ್ರಿಗಳು ಮಾತನಾಡುದ್ದೇವೆ. ಅಲ್ಲಿಂದ VCಯವರಿಗೆ ಹೊಸ ಒಂದು ಆದೇಶವನ್ನೂ ಕೊಟ್ಟಿದ್ದೇನೆ. immidiate ಆಗಿ ಹೊಸ proposal ವರ್ಷ ವರ್ಷಕ್ಕೆ BSc Agriculture course start ಮಾಡುವುದಕ್ಕೆ ಎಷ್ಟು ವೆಚ್ಚವಾಗುತ್ತದೆ ಎನ್ನುವುದರ ಬಗ್ಗೆ ಒಂದು ಹೊಸ proposalನ್ನು ಕಳುಹಿಸಿಕೊಡಿ ಎಂದು ಹೇಳಿದ್ದೇನೆ. mostly ಅದು ನಾಳೆ ನನಗೆ ಬರಬಹುದು. proposal ತಕ್ಷಣ ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಅದನ್ನು ಬಹಳ ಶೀಘ್ರವಾಗಿ ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ ಶ್ರೀನಿವಾಸ ಗೌಡ: ತಾವು ಒಂದು ಕೆಲಸವನ್ನು ಮಾಡಿ

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಶ್ರೀನಿವಾಸ ಗೌಡರೆ, ಈ ಮಾತನ್ನು ತಾವು ಬಜೆಟ್‌ಗಿಂತ ಮುಂಚೆ ಹೇಳಿದ್ದರೆ, ನಾನು ಬಜೆಟ್‌ನಲ್ಲಿ ಸೇರಿಸಿಕೊಳ್ಳುತ್ತಿದ್ದೆ. ನೋಡಿ ನನಗೆ ಯಾರೂ ಹೇಳಿಲ್ಲ.

ಶ್ರೀ ಕೆ ಶ್ರೀನಿವಾಸ ಗೌಡ: ನಾನು ನಿಮ್ಮ ಹತ್ತಿರ ಮಾತನಾಡಿದಾಗ ನೀವು ಮಾಡಿದ್ದೇನೆಂದು ಹೇಳಿರುತ್ತೀರಿ. ನಾನು ಅದಕ್ಕಾಗಿ ಸುಮ್ಮನೆ ಇದ್ದೆ. ಈಗ ನಾನು ಏನು ಹೇಳುತ್ತೇನೆಂದರೆ, ಅಡ್ಮಿಷನ್‌ಗೆ ನೀವು ಇನಸ್ಟ್ರಕ್ಷನ್ ಕೊಡಿ, ಅದಕ್ಕೆ ನೀವು ಆಮೇಲೆ ದುಡ್ಡನ್ನು ಕೊಡಿ.

ಶ್ರೀ ಬಂಡೆಪ್ಪ ಕಾಶೆಂಪೂರ್: ನಾವು ನೀವು ಮತ್ತು ವೈಸ್‌ಚಾನ್ಸಲರ್ ಕುಳಿತುಕೊಂಡು ಇದಕ್ಕೆ ಒಂದು ತೀರ್ಮಾನವನ್ನು ತೆಗೆದು ಕೊಳ್ಳೋಣ. Academic involvement ಇರುವುದರಿಂದ ಇದರ ಬಗ್ಗೆ Vice Chancellor ಜೊತೆಯಲ್ಲಿ ಕುಳಿತುಕೊಂಡು ಇದನ್ನು ಯಾವ ರೀತಿಯಾಗಿ ಮಾಡಬೇಕು ಎನ್ನುವುದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದು ಕೊಳ್ಳುತ್ತೇನೆ.

ಶ್ರೀ ಕೆ ಶ್ರೀನಿವಾಸ ಗೌಡ: O K.